**ಪಾಠ–5** **ಜುಲೈ 25–31**

# ಪರಿಶುದ್ಧಾತ್ಮ- ಬಲಯುತ ಸಾಕ್ಷಿ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಯೋಹಾನ 15:26,27; ಅ.ಕೃ 2:41, 42; ಅ.ಕೃ 8:4; ಇಬ್ರಿಯ 4:12; ಅ.ಕೃ 17:33,34; ಅ.ಕೃ 18:8.

**ಸ್ಮರಣ ವಾಕ್ಯ : "ಹೀಗೆ ಪ್ರಾರ್ಥನೆ ಮಾಡಿದ ಮೇಲೆ ಅವರು ಕೂಡಿದ್ದ ಸ್ಥಳವು ನಡುಗಿತು. ಅವರೆಲ್ಲರೂ ಪವಿತ್ರಾತ್ಮಭರಿತರಾಗಿ ದೇವರವಾಕ್ಯವನ್ನು ಧೈರ್ಯದಿಂದ ಹೇಳುವವರಾದರು** (ಅ.ಕೃ 4:31).

"ನೀವು ಲೋಕದ ಎಲ್ಲ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" ಎಂದು ಯೇಸುಕ್ರಿಸ್ತನು ಆದಿವಿಶ್ವಾಸಿಗಳಿಗೆ ಅಪ್ಪಣೆ ಕೊಟ್ಟಾಗ ಇದು ಅಸಾಧ್ಯವಾದ ಕಾರ್ಯವೆಂದು ಕಂಡಿರಬಹುದು (ಮಾರ್ಕ 16:15). ತಮ್ಮ ಎದುರಿಗಿದ್ದ ದೊಡ್ಡ ಕೆಲಸವನ್ನು ಅವರು ಹೇಗೆ ಸಾಧಿಸುವುದಕ್ಕಾಯಿತು? ಅವರು ಕೆಲವೇ ಮಾತ್ರ ಅವರ ಸಂಪನ್ಮೂಲ ಮಿತಿಯಾಗಿತ್ತು. ಅವರು ಶಿಕ್ಷಣವಿಲ್ಲದ ಸಾಧಾರಣ ವಿಶ್ವಾಸಿಗಳು. ಆದರೆ ಅವರಿಂದ ಅಸಾಧಾರಣವಾದ ಕೆಲಸವನ್ನು ಮಾಡಿಸಲು ಅವರನ್ನು ಬಲಗೊಳಿಸುವ ದೇವರು ಅಸಾಧಾರಣನಾಗಿದ್ದನು.

ಯೇಸು ಹೀಗೆ ಹೇಳುತ್ತಾನೆ– "ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ

* **ಆಗಸ್ಟ್ 1ನೇ ತಾರೀಖಿನ ಸಬ್ಬತ್ತಿಗೆ ಈ ಪಾಠವನ್ನು ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು (ಅ.ಕೃ 1:8). ಪವಿತ್ರಾತ್ಮ ಬಲವು ಜೀವನವನ್ನು ಪರಿವರ್ತಿಸುವ ಲೋಕವನ್ನು ಬದಲಾಯಿಸುವಷ್ಟು ಶಕ್ತಿಯಾದ ಶಿಲುಬೆಯ ಸಂದೇಶವನ್ನು ಹಂಚಿಕೊಳ್ಳುವಂತೆ ವಿಶ್ವಾಸಿಗಳನ್ನು ಬಲಗೊಳಿಸಿತು. ಪವಿತ್ರಾತ್ಮನು ಅವರ ಸಾಕ್ಷಿಯನ್ನು ಪರಿಣಾಮಕಾರಿಯನ್ನಾಗಿ ಮಾಡಿದನು. ಕೆಲವೇ ಕೆಲವು ದಶಕಗಳಲ್ಲಿ (ಹತ್ತಾರು ವರ್ಷಗಳಲ್ಲಿ) ಸುವಾರ್ತೆಯು ಇಡೀ ಲೋಕವನ್ನು ಮುಟ್ಟಿತು. ಮೊಟ್ಟಮೊದಲಿನ ವಿಶ್ವಾಸಿಗಳು 'ಲೋಕವನ್ನು ಅಲ್ಲೋಲ ಕಲ್ಲೋಲ ಮಾಡಿದರು' ಎಂದು ಅಪೋಸ್ತಲರ ಕೃತ್ಯಗಳು ಹೇಳುತ್ತದೆ (ಅ.ಕೃ 17:6). "ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸಾರಲ್ಪಟ್ಟಂಥ ಸುವಾರ್ತೆ" ಎಂಬುದಾಗಿ ಪೌಲನು ಹೇಳುತ್ತಾನೆ (ಕೊಲೊಸ್ಸೆ 1:23). ಈ ವಾರದ ಪಾಠದಲ್ಲಿ ನಮ್ಮ ಸಾಕ್ಷಿಯನ್ನು ಬಲಗೊಳಿಸುವುದರಲ್ಲಿ ಪವಿತ್ರಾತ್ಮನ ಕಾರ್ಯದ ಬಗ್ಗೆ ದೃಷ್ಟಿ ಹರಿಸೋಣ.

**ಭಾನುವಾರ** **ಜುಲೈ 26**

## ಯೇಸು ಮತ್ತು ಪರಿಶುದ್ಧಾತ್ಮನ ವಾಗ್ದಾನ

ಯೇಸುವು ತನ್ನ ಶಿಷ್ಯರನ್ನು ಬಿಟ್ಟು ಪರಲೋಕಕ್ಕೆ ಏರಿ ಹೋಗುವ ಸಂದರ್ಭದಲ್ಲಿ ಅವರಿಗೆ ಪವಿತ್ರಾತ್ಮನ ವಾಗ್ದಾನವನ್ನು ಮಾಡಿದನು. "ನಾನು ಹೋಗುವುದು ನಿಮಗೆ ಹಿತಕರವಾಗಿದೆ; ಹೇಗೆಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವುದಿಲ್ಲ; ನಾನು ಹೋದರೆ ಆತನನ್ನು ನಿಮ್ಮ ಬಳಿಕೆ ಕಳುಹಿಸಿಕೊಡುತ್ತೇನೆ" (ಯೋಹಾನ 16:7). 'ಸಹಾಯಕನು' ಎಂಬುದಕ್ಕೆ ಗ್ರೀಕ್‌ನಲ್ಲಿ ಪರಾಕ್ಲಿಟಾಸ್ ಎಂಬ ಪದವಿದೆ. ಇದು ಸಹಾಯ ಮಾಡುವ ಸಲುವಾಗಿ ಜೊತೆಯಲ್ಲೇ ನಡೆಯುವವನು ಎಂಬ ಅರ್ಥ ಕೊಡುತ್ತದೆ. ವಿಶ್ವಾಸಿಗಳ ಸಂಗಡ ನಡೆಯುತ್ತಾ ಅವರ ಸಾಕ್ಷಿಯುಕ್ತವಾದ ಚಟುವಟಿಕೆಗಳಲ್ಲಿ ಅವರನ್ನು ಬಲಗೊಳಿಸಿ ಬೇಕಾದ ಮಾರ್ಗದರ್ಶನ ನೀಡುವುದು ಪವಿತ್ರಾತ್ಮನ ಕೆಲಸಗಳಲ್ಲಿ ಮುಖ್ಯವಾದುದಾಗಿದೆ. ನಾವು ಕ್ರಿಸ್ತನಿಗೆ ಸಾಕ್ಷಿ ಕೊಡುವಾಗ ನಾವು ಒಂಟಿಗರಾಗಿರುವುದಿಲ್ಲ. ಯಾರು ಹೃದಯದಲ್ಲಿ ಪ್ರಾಮಾಣಿಕರಾಗಿ ಹಂಬಲಿಸುವರೋ ಅವರನ್ನು ನಡೆಸುವ ಸಲುವಾಗಿ ಪವಿತ್ರಾತ್ಮನು ಜೊತೆಗಿರುತ್ತಾನೆ.

ನಾವು ಜನರನ್ನು ಭೇಟಿ ಮಾಡುವ ಮೊದಲೇ ಆತನು ಅವರ ಹೃದಯವನ್ನು ಸಿದ್ಧಪಡಿಸುತ್ತಾನೆ. ಜನರು ಒಪ್ಪುವಂತೆ ಅವರಲ್ಲಿ ಅವಶ್ಯಕವಾದ ಮನವರಿಕೆಯನ್ನು ಉಂಟುಮಾಡುವ ಮಾತುಗಳನ್ನು ಪವಿತ್ರಾತ್ಮನು ನಮಗೆ ಕೊಡುತ್ತಾನೆ ಮತ್ತು ಆತನ ಪ್ರವರ್ತನೆಗೆ ಅವರು ಪ್ರತಿಕ್ರಿಯಿಸುವ ಹಾಗೆ ಅವರನ್ನು ಬಲಪಡಿಸುತ್ತಾನೆ.

ಯೋಹಾನ 15:26,27 ಮತ್ತು ಯೋಹಾನ 16:8 ವಚನಗಳನ್ನು ಓದಿರಿ. ಈ ವಚನಗಳು ಸಾಕ್ಷಿಕೊಡುವ ಕೆಲಸದಲ್ಲಿ ಪವಿತ್ರಾತ್ಮನು ಯಾವ ಪಾತ್ರವನ್ನು ವಹಿಸುತ್ತಾನೆಂದು ನಮಗೆ ಹೇಳುತ್ತವೆ?

ಪವಿತ್ರಾತ್ಮನು ಯೇಸುಕ್ರಿಸ್ತನ ಬಗ್ಗೆ ಸಾಕ್ಷಿ ಕೊಡುತ್ತಾನೆ. ಕ್ರಿಸ್ತನ ಹತ್ತಿರಕ್ಕೆ ಸಾಧ್ಯವಾದಷ್ಟು ಜನರನ್ನು ನಡೆಸುವುದೇ ಪವಿತ್ರಾತ್ಮನ ಉನ್ನತ ಗುರಿಯಾಗಿದೆ. ಯೇಸುಕ್ರಿಸ್ತನನ್ನು ಮಹಿಮೆಪಡಿಸುವುದು ಆತನ ಕೆಲಸವಾಗಿದೆ. ಈ ಪಾತ್ರವನ್ನು ನಿರ್ವಹಿಸುವ ಪವಿತ್ರಾತ್ಮನು ಎಲ್ಲಾ ವಿಶ್ವಾಸಿಗಳಿಗೆ ಸಾಕ್ಷಿ ಕೊಡುವ ಜವಾಬ್ದಾರಿಯನ್ನು ಅವರಿಗೆ ಮನವರಿಕೆ ಮಾಡುತ್ತಾನೆ. ಆತನು ನಮ್ಮ ಸುತ್ತಲೂ ಇರುವ ಜನರೊಳಗಿರುವ ಅವಕಾಶಗಳನ್ನು ನಾವು ಕಂಡುಕೊಳ್ಳುವಂತೆ ನಮ್ಮ ಕಣ್ಣುಗಳನ್ನು ತೆರೆಯುತ್ತಾನೆ. ಜನರು ಸುವಾರ್ತೆಯನ್ನು ಸ್ವೀಕಾರ ಮಾಡುವ ಹಾಗೆ ತೆರೆಯ ಹಿಂದೆ ಕೆಲಸ ಮಾಡುತ್ತಾನೆ. ಯೋಹಾನನ ಸುವಾರ್ತೆಯು ಸ್ಪಷ್ಟವಾಗಿ ಹೀಗೆ ಹೇಳುತ್ತದೆ. "ಪವಿತ್ರಾತ್ಮನು ಬಂದು ಪಾಪ ನೀತಿ ನ್ಯಾಯತೀರ್ಪಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು" (ಯೋಹಾನ 16:8). ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪಾಪಿಯು ತಾನು ದೇವರಿಂದ ಅಗಲಿ ಹೋಗಿದ್ದೇನೆಂಬ ಆಳವಾದ ಅರಿವನ್ನು ಉಂಟುಮಾಡಿ ಅವನ ಹೃದಯದಲ್ಲಿ ಪಶ್ಚಾತ್ತಾಪವನ್ನು ಹುಟ್ಟಿಸುವ ಕೆಲಸವನ್ನು ಪವಿತ್ರಾತ್ಮನು ಮಾಡುತ್ತಾನೆ. ಪವಿತ್ರಾತ್ಮನು ನೀತಿಯ ಲೋಕವನ್ನು ಸಹಾ ಮನವರಿಕೆಗೆ ಕರೆಯುತ್ತಾನೆ. ಆತನು ನಮಗೆ ನಮ್ಮ ಪಾಪಗಳನ್ನು ತೋರಿಸಿಕೊಡುವುದಲ್ಲದೆ ನಮ್ಮನ್ನು ನೀತಿಯಲ್ಲಿ ಸದಾ ಪ್ರಬೋಧಿಸುತ್ತಾನೆ. ಆತನು ಯೇಸುಕ್ರಿಸ್ತನ ನೀತಿಯನ್ನು ಉದಾತ್ತತೆಗೆ (ಶ್ರೇಷ್ಠತೆಗೆ) ವ್ಯತಿರಿಕ್ತವಾಗಿ ನಮ್ಮ ಹೊಲಸನ್ನು ನಮಗೆ ತೋರಿಸಿ ಕೊಡುತ್ತಾನೆ. ಪವಿತ್ರಾತ್ಮನ ಪಾತ್ರವು ನಾವು ಎಷ್ಟು ಕೆಟ್ಟವರಾಗಿದ್ದೇವೆ ಎಂಬುದನ್ನು ತೋರಿಸುವುದು ಮಾತ್ರವಲ್ಲದೆ ಯೇಸುಕ್ರಿಸ್ತನು ಎಷ್ಟು ಒಳ್ಳೆಯವನು, ಎಂಥಾ

ದಯಾಮಯನು, ಎಂಥಾ ಕರುಣಾಶಾಲಿಯು ಮತ್ತು ಎಂಥಾ ಪ್ರೀತಿಯುಳ್ಳವನು ಎಂಬುದನ್ನು ತೋರಿಸಿಕೊಟ್ಟು ನಮ್ಮನ್ನು ಆತನ ಹೋಲಿಕೆಗೆ ಸರಿಯಾಗಿ ರೂಪಿಸುವುದೂ ಆಗಿದೆ.

ಸಾಕ್ಷಿ ಎಂಬುದು ಯೇಸುಕ್ರಿಸ್ತನನ್ನು ಮಹಿಮೆಪಡಿಸುವುದಕ್ಕೋಸ್ಕರ ನಾವು ಪವಿತ್ರಾತ್ಮನ ಜೊತೆ ಸಹಕರಿಸುವುದೇ ಆಗಿದೆಯೆಂದು ಸರಳವಾಗಿ ಹೇಳಬಹುದು. ಪವಿತ್ರಾತ್ಮನ ಬಲದಿಂದ ಮತ್ತು ಆತನ ಮಾರ್ಗದರ್ಶಕತ್ವದಲ್ಲಿ ನಮ್ಮ ಜೀವಿತಗಳನ್ನು ಪರಿವರ್ತನೆ ಮಾಡಿದ ಪರಮಾಶ್ಚರ್ಯನಾದ ಕ್ರಿಸ್ತನಿಗೆ ಸಾಕ್ಷಿ ಕೊಡಬೇಕಾಗಿದೆ.

ನಾವು ಆತ್ಮಗಳಿಗಾಗಿ ದುಡಿಯಲು ಆಶೆ ಪಡುವಾಗ ಪರಿವರ್ತನೆಯನ್ನು ಮಾಡುವವನು ಪವಿತ್ರಾತ್ಮನು ಮಾತ್ರವೆಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು ಏಕೆ?

**ಸೋಮವಾರ** **ಜುಲೈ 27**

## ಬಲಹೊಂದಿದ ಸಭೆ

ಅಪೋಸ್ತಲರ ಕೃತ್ಯಗಳ ಪುಸ್ತಕವನ್ನು ಪವಿತ್ರಾತ್ಮನ ಕೃತ್ಯಗಳ ಪುಸ್ತಕ ಎಂಬುದಾಗಿ ಕರೆದಿರುವುದು ಸಮಂಜಸವಾಗಿದೆ. ಸಭೆಯ ಅಭಿವೃದ್ಧಿಯಲ್ಲಿ ಮತ್ತು ಸುವಾರ್ತೆಯ ಪ್ರಚಾರದಲ್ಲಿ ಸಾಕ್ಷಿ ಕೊಡುವಿಕೆಯು ಒಂದು ರೋಮಾಂಚನಕಾರಿಯಾದ ಸಾಹಸವಾಗಿದೆ. ಅಪೋಸ್ತಲರ ಕೃತ್ಯಗಳು ಕ್ರಿಸ್ತನಿಗೆ ಪ್ರತಿಷ್ಠೆ ಪಡಿಸಿಕೊಂಡ ವಿಶ್ವಾಸಿಗಳು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟು ಕ್ರಿಸ್ತನಿಗಾಗಿ ಲೋಕವನ್ನು ತಲುಪವವರ ಕಥೆಯಾಗಿದೆ. ಅದ್ಭುತಕರವಾದ ಫಲಿತಾಂಶವನ್ನು ಸಾಧಿಸುವುದಕ್ಕೆ ಅವರು ಸಂಪೂರ್ಣವಾಗಿ ಪವಿತ್ರಾತ್ಮನ ಮೇಲೆ ಅವಲಂಬಿತರಾಗಿರುತ್ತಾರೆ. ಸಂಪೂರ್ಣವಾಗಿ ತಮ್ಮನ್ನು ಪವಿತ್ರಾತ್ಮನಿಗೆ ಪ್ರತಿಷ್ಠೆಪಡಿಸಿಕೊಂಡ ಹೆಂಗಸರು ಮತ್ತು ಗಂಡಸರು ಆತನ ಮೂಲಕ ಏನು ಸಾಧಿಸುತ್ತಾರೆಂಬುದಕ್ಕೆ ಅವರುಗಳೇ ಒಂದು ಉದಾಹರಣೆಗಳಾಗಿದ್ದಾರೆ.

ಅ.ಕೃ. 2:41,42; ಅ.ಕೃ 4:4,31; ಅ.ಕೃ 5:14,42; ಅ.ಕೃ. 6:7 ಮತ್ತು ಅ.ಕೃ 16:5 ಈ ವಚನಗಳಲ್ಲಿ ನೀವು ಏನನ್ನು ಮೆಚ್ಚುವಿರಿ? ಈ ಪುಸ್ತಕದ ಲೇಖನನಾದ ಲೂಕನು ಅಂತಹ ತ್ವರಿತವಾದ ಬೆಳವಣಿಗೆಯನ್ನು ದಾಖಲಿಸುತ್ತಾ

ಯಾವ ಸಂದೇಶವನ್ನು ಹಂಚಿಕೊಳ್ಳಲು ಬಯಸುತ್ತಾನೆ?

ಆದಿಸಭೆಯಲ್ಲಿ ಪವಿತ್ರಾತ್ಮನ ಸುವಾರ್ತಾ ಸೇವೆಯನ್ನು ಪ್ರತಿ ಓದುಗರ ಜೊತೆ ಹಂಚಿಕೊಳ್ಳುವ ಉದ್ದೇಶದಿಂದ ಲೂಕನು ಅಪೋಸ್ತಲರ ಕೃತ್ಯಗಳು ಪುಸ್ತಕವನ್ನು ಬರೆದಿದ್ದಾನೆ. ಪವಿತ್ರಾತ್ಮನು ಮೊದಲ ಶತಮಾನದಲ್ಲಿ ಮಾಡಿದ ಸಂಚಲನೆಯನ್ನು ಸಂಖ್ಯೆಯಲ್ಲಿ ವ್ಯಕ್ತಪಡಿಸುವುದಕ್ಕೆ ಲೂಕನು ಹಿಂಜರಿಯದಿರುವುದನ್ನೂ ಸಹಾ ಇಲ್ಲಿ ಗಮನಿಸಬಹುದು. ಅಂದರೆ ಲೂಕನು ದೀಕ್ಷಾಸ್ನಾನ ಪಡೆದವರನ್ನೂ ಲೆಕ್ಕ ಹಾಕುತ್ತಾ ಹೋಗುತ್ತಾನೆ. ಅ.ಕೃ. 2:41ರಲ್ಲಿ ಆತನು 3000 ಜನರು ಒಂದೇ ದಿನದಲ್ಲಿ ಒಂದೇ ಸ್ಥಳದಲ್ಲಿ ದೀಕ್ಷಾಸ್ನಾನ ಹೊಂದಿದುದನ್ನು ಎತ್ತಿ ಹೇಳುತ್ತಾನೆ. ಅ.ಕೃ 4:4ರಲ್ಲಿ 5000 ಜನರ ದೀಕ್ಷಾಸ್ನಾನವನ್ನು ಹೇಳುತ್ತಾನೆ. ಅ.ಕೃ 5:14 ಎಷ್ಟೋಮಂದಿ ಗಂಡಸರು ಹೆಂಗಸರು ಕರ್ತನ ಮಂಡಲಿಯನ್ನು ಸೇರಿದರು ಎಂದು ಹೇಳುತ್ತಾನೆ.

ಸಾಧಾರಣವಾದ ಒಂಟಿ ವ್ಯಕ್ತಿಯಾದ ಲೂದ್ಯಳಿರಬಹುದು, ಫಿಲಿಪ್ಪಿಯ ಸೆರೆಮನೆ ಅಧಿಕಾರಿಯಾಗಿರಬಹುದು. ದೆವ್ವ ಹಿಡಿದ ಸೇವಕಿಯಾದ ಹುಡುಗಿಯಾಗಿರಬಹುದು ಅಥವಾ ಇಥಿಯೋಪಿಯ ದೇಶದ ಕಂಚುಕಿಯಾಗಿರ ಬಹುದು ಲೂಕನು ಇವರನ್ನೆಲ್ಲಾ ಮನಸ್ಸಿಗೆ ತೆಗೆದುಕೊಂಡು ಅವರ ಹೃದಯಗಳಲ್ಲಿ ಪವಿತ್ರಾತ್ಮನು ಚಲಿಸಿದುದನ್ನು ದಾಖಲಿಸುತ್ತಾನೆ. ಇಲ್ಲಿ ಗಮನಿಸಬಹುದಾದ ಮುಖ್ಯ ಅಂಶವೇನೆಂದರೆ ಪ್ರತಿಯೊಂದು ಸಮೂಹದ ಹಿಂದೆ ಒಬ್ಬಂಟಿಯಾದ ಮನುಷ್ಯನಿದ್ದಾನೆಂಬುದು. ಇವರಲ್ಲಿ ಪ್ರತಿಯೊಬ್ಬನು ದೇವರ ಮಗುವಾಗಿದ್ದು ಅದಕ್ಕಾಗಿ ಕ್ರಿಸ್ತನು ಸತ್ತಿದ್ದಾನೆ. ಹೌದು, ನಾವು ದೊಡ್ಡ ಸಂಖ್ಯೆಯನ್ನು ಇಷ್ಟಪಡುತ್ತೇವೆ. ಆದರೆ ಕಡೆಯಲ್ಲಿ ಸಾಕ್ಷಿಕೊಡುವಂಥದ್ದು ಒಬ್ಬರಾದ ಒಬ್ಬರಿಗೆ ಹಂಚುವಂತಹ ಕ್ರಮವಾಗಿದೆ.

ಹೊಸ ಒಡಂಬಡಿಕೆಯ ಸಭೆಯ ತ್ವರಿತವಾದ ಬೆಳವಣಿಗೆಯನ್ನು ಸರಿಯಾಗಿ ನಿರ್ವಹಿಸಲು ಹೊಸಹೊಸ ಸಭೆಗಳು ಅಲ್ಲಲ್ಲಿ ಸ್ಥಾಪಿಸಲ್ಪಟ್ಟವು. ಆದಿಸಭೆಯು

ತ್ವರಿತವಾಗಿ ಬೆಳೆಯುವುದಕ್ಕೆ ಕಾರಣವೇನೆಂದರೆ ಸಭೆಗಳನ್ನು ಅವ್ಯಾಹತವಾಗಿ ಅಲ್ಲಲ್ಲಿ ಸ್ಥಾಪಿಸುತ್ತಾ ಹೋದರು. ಇದರಲ್ಲಿ ನಮಗೆ ಮುಖ್ಯವಾದ ಯಾವ ಪಾಠವಿದೆ?

ಹೊಸಒಡಂಬಡಿಕೆಯ ಸಭೆಯ ಪ್ರಧಾನವಾದ ಗಮನವು ಧರ್ಮಪ್ರಚಾರ ಕೆಲಸವಾಗಿತ್ತು. ನಮ್ಮ ಸ್ಥಳೀಯ ಸಭೆಯಲ್ಲಾದರೂ ಸರಿಯೆ ನಾವು ಮಾಡುವ ಎಲ್ಲಾ ಕಾರ್ಯಗಳಲ್ಲಿ ಧರ್ಮಪ್ರಚಾರವನ್ನೇ ಮುಖ್ಯವಾದ ತಿರುಳನ್ನಾಗಿ ಮಾಡಿಕೊಳ್ಳಲು ಹೇಗೆ ಖಾತ್ರಿಪಡಿಸಬಹುದು?

**ಮಂಗಳವಾರ** **ಜುಲೈ 28**

## ಪವಿತ್ರಾತ್ಮನು ಮತ್ತು ಸಾಕ್ಷಿ ಕೊಡುವುದು

ಅಪೋಸ್ತಲರ ಕೃತ್ಯಗಳು ಪುಸ್ತಕದಾದ್ಯಂತ ಪವಿತ್ರಾತ್ಮನು ಶಕ್ತಿಯುತವಾಗಿ ಇರುವುದನ್ನು ಕಾಣುತ್ತೇವೆ. ಆತನು ವಿಶ್ವಾಸಿಗಳು ನಾನಾ ರೀತಿಯಲ್ಲಿ ತಮ್ಮ ಕರ್ತನಿಗೆ ಸಾಕ್ಷಿಕೊಡುವಾಗ ಅವರ ಮೂಲಕ ಅವರೊಡನೆ ಸೇವೆ ಮಾಡಿದನು. ಹಗೆತನವಿರುವ ಸಂಸ್ಕೃತಿಯಲ್ಲಿ (ಸಮಾಜದಲ್ಲಿ) ಸಾಕ್ಷಿಕೊಡುವಾಗ ಅವನಿಗೆ ಶೋಧನೆಗಳು ಮತ್ತು ಸವಾಲುಗಳು ಎದುರಾದಾಗ ಅವರನ್ನು ಬಲಪಡಿಸಿದನು. ಆತನು ಪ್ರಾಮಾಣಿಕವಾಗಿ ತಮ್ಮ ಹೃದಯಗಳಲ್ಲಿ ಸತ್ಯವನ್ನು ಅಪೇಕ್ಷಿಸುವವರ ಬಳಿಗೆ ವಿಶ್ವಾಸಿಗಳನ್ನು ಕರೆದುಕೊಂಡು ಹೋದನು. ಆತನು ಜನರ ಹೃದಯಗಳನ್ನು ಎಲ್ಲಾ ನಗರಗಳಲ್ಲೂ ಸುವಾರ್ತಿಕರು ಅವರನ್ನು ಸಂಧಿಸುವುದಕ್ಕೆ ಮೊದಲೇ ಸಿದ್ಧಪಡಿಸಿರುತ್ತಿದ್ದನು. ಆತನು (ಪವಿತ್ರಾತ್ಮನು) ಅವರು ಎಂದೆಂದೂ ನೆನಸದ ರೀತಿಯಲ್ಲಿ ಅವರಿಗೆ ಅವಕಾಶದ ಬಾಗಿಲುಗಳನ್ನು ತೆರೆದು ಅವರ ಮಾತುಗಳನ್ನು ಕ್ರಿಯೆಗಳನ್ನು ಸಬಲಪಡಿಸಿದನು.

ಅ.ಕೃ. 7:55; ಅ.ಕೃ. 8:29; ಅ.ಕೃ. 11:15; ಅ.ಕೃ. 15:28,29; ಅ.ಕೃ. 16:6–10 ವಚನಗಳನ್ನು ಓದಿರಿ. ಇಲ್ಲಿ ಪಟ್ಟಿ ಮಾಡಿರುವ ಸತ್ಯವೇದದ ವಚನಗಳಲ್ಲಿ ಪವಿತ್ರಾತ್ಮನು ಸಾಕ್ಷಿ ಕೊಡುವ ಶಿಷ್ಯರಿಗೆ ಪ್ರತಿ ಸಂದರ್ಭದಲ್ಲೂ ಹೇಗೆ ಸಹಾಯ ಮಾಡಿದನು? ಇನ್ನೊಂದು ರೀತಿಯಲ್ಲಿ ಕೇಳುವುದಾದರೆ, ಈ ಸನ್ನಿವೇಶಗಳಲ್ಲಿ ಪವಿತ್ರಾತ್ಮನು ಮಾಡಿದ ಬೇರೆ ಬೇರೆ ಕೆಲಸಗಳೇನು?

ಪವಿತ್ರಾತ್ಮನು ಮೊದಲ ಶತಮಾನದಲ್ಲಿ ಮಾಡಿದ ವಿವಿಧ ಸೇವೆಗಳು ಪರಮಾಶ್ಚರ್ಯ ಉಂಟುಮಾಡುತ್ತವೆ. ಮೇಲೆ ಹೇಳಿದ ಅನುಭವಗಳು ಆತನು ಮಾಡುವ ಕಾರ್ಯಕಲಾಪಗಳಿಗೆ ಕೇವಲ ಮಾದರಿಯಾಗಿವೆಯಷ್ಟೆ. ಆತನು (ಪವಿತ್ರಾತ್ಮನು) ಸ್ತೆಫನನನ್ನು ಹತೋಟಿ ತಪ್ಪಿದ ನಿರ್ದಯ ಜನರ ಗುಂಪು ಆತನನ್ನು ಕಲ್ಲೆಸೆನು ಕೊಲ್ಲುವಾಗ ಕರ್ತನಿಗೆ ಸಾಕ್ಷಿಯಾಗುವಂತೆ ಆತನನ್ನು ಬಲಪಡಿಸಿದನು. ಆತನು ಫಿಲಿಪ್ಪನನ್ನು ಅದ್ಭುತಕರವಾದ ರೀತಿಯಲ್ಲಿ ಸತ್ಯಕ್ಕಾಗಿ ತವಕಪಡುತ್ತಿದ್ದ ದೊಡ್ಡ ಅಧಿಕಾರಿಯಾಗಿದ್ದ ಇಥಿಯೋಪಿಯಾದ ಕಂಚುಕಿಯ ಬಳಿಗೆ ನಡೆಸಿದನು. ಇದರಿಂದ ಆಫ್ರಿಕಾ ಖಂಡದ ಜನರಿಗೆ ಸುವಾರ್ತೆ ತಲುಪಲು ದಾರಿ ತೆರೆಯಿತು. ದೇವರು ಅನ್ಯಜನರನ್ನೂ ಸಹಾ ಸ್ವೀಕರಿಸಿದ್ದಾನೆಂದು ಪೇತ್ರನಿಗೆ ದೃಢಪಡಿಸಲು ಪವಿತ್ರಾತ್ಮನು ಅನ್ಯಜನರಿಗೆ ಅಭಿಷೇಕ ಮಾಡಿದನು. ಆತನು ಅನೇಕ ಸಂದರ್ಭದಲ್ಲಿ ಸಭೆಯು ಸುನ್ನತಿಯ ವಿಷಯದಲ್ಲಿ ಒಡೆದು ಹೋಗದ ಹಾಗೆ ಐಕ್ಯತೆ ತಂದನು. ಆತನು ಇಡೀ ಯೂರೋಪ್ ಖಂಡವನ್ನು ಪೌಲನ ಸುವಾರ್ತೆಗೆ ತೆರೆದಿಟ್ಟನು. ಪವಿತ್ರಾತ್ಮನು ಹೊಸಒಡಂಬಡಿಕೆಯ ಕಾಲದಲ್ಲಿ ಬಹಳ ಕ್ರಿಯಾಶೀಲನಾಗಿದ್ದನು ಮತ್ತು ಇಂದಿನ ಸಭೆಯುಲ್ಲೂ ಆತನು ಕ್ರಿಯಾಶೀಲನಾಗಿದ್ದಾನೆ. ಆತನು ನಮಗೆ ಶಕ್ತಿ ತುಂಬಲು ಅಪೇಕ್ಷಿಸುತ್ತಾನೆ, ಬಲಪಡಿಸುತ್ತಾನೆ, ಬೋಧಿಸುತ್ತಾನೆ, ಮಾರ್ಗದರ್ಶನ ಮಾಡುತ್ತಾನೆ, ಐಕ್ಯತೆ ತರುತ್ತಾನೆ, ಪ್ರಪಂಚದಲ್ಲಿ ಬಹಳ ಮುಖ್ಯವಾದ ಅಂದರೆ ಹೆಂಗಸರನ್ನು ಮತ್ತು ಗಂಡಸರನ್ನು ಕ್ರಿಸ್ತನೆಡೆಗೆ ಮತ್ತು ಆತನ ಸತ್ಯಕ್ಕೆ ನಡೆಸುವ ಧರ್ಮಕಾರ್ಯಕ್ಕೆ ನಮ್ಮನ್ನು ಕಳುಹಿಸುತ್ತಾನೆ. ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಅಂಶವೇನೆಂದರೆ ಪವಿತ್ರಾತ್ಮನು ಹೇಗೆ ಆದಿಸಭೆಯಲ್ಲಿ ಅಪೋಸ್ತಲರ ಕಾಲದಲ್ಲಿ ಇದ್ದನೋ ಹಾಗೆಯೇ ಇಂದಿಗೂ ಕ್ರಿಯಾಶೀಲತೆಯಿಂದ ಕೆಲಸ ಮಾಡುತ್ತಿದ್ದಾನೆ.

ಪ್ರತಿದಿನವೂ ನಾವು ಹೆಚ್ಚುಮುಕ್ತವಾಗಿ ಪವಿತ್ರಾತ್ಮನ ಶಕ್ತಿಗೆ ಮಣಿದು ನಮ್ಮ ಜೀವಿತದಲ್ಲಿ ಇರುವುದಕ್ಕೆ ನಾವು ಏನು ಮಾಡಬಹುದು? ಪವಿತ್ರಾತ್ಮನು ನಮ್ಮಲ್ಲಿ ನಮ್ಮ ಮೂಲಕ ಕೆಲಸ ಮಾಡುವ ಹಾಗೆ ನಾವು ಯಾವ ತರದ ಒಳ್ಳೆಯ ಆಯ್ಕೆಗಳನ್ನು ಮಾಡಬಹುದು?

**ಬುಧವಾರ** **ಜುಲೈ 29**

## ಪವಿತ್ರಾತ್ಮನು, ವಾಕ್ಯ ಮತ್ತು ಸಾಕ್ಷಿ ಕೊಡುವುದು

ಹೊಸಒಡಂಬಡಿಕೆಯ ಸಭೆಯಲ್ಲಿ ಸಾಕ್ಷಿಕೊಡುವ ಹೃದಯವು ದೇವರ ವಾಕ್ಯದ ನೆಲೆಯಾಗಿತ್ತು. ಪಂಚಾಶತ್ತಮ ದಿನದಂದು ಪೇತ್ರನು ಮಾಡಿದ ಪ್ರಸಂಗದ ಬಹುಭಾಗವು ಹಳೆಯ ಒಡಂಬಡಿಕೆಯನ್ನು ಒಳಗೊಂಡಿತ್ತು. ಅದರಿಂದಲೇ ಆತನು ಯೇಸುವು ಮೆಸ್ಸೀಯನೆಂದು ಅವರಿಗೆ ತೋರಿಸಿಕೊಟ್ಟನು. ಸ್ತೆಫನನು ಮೊದಲ ರಕ್ತಸಾಕ್ಷಿಯಾದಾಗ ಹಳೆಯ ಒಡಂಬಡಿಕೆಯಲ್ಲಿರುವ ಇಸ್ರಾಯೇಲ್ಯರ ಚರಿತ್ರೆಯನ್ನು ಅವರ ಮುಂದೆ ಅವಲೋಕಿಸಿದನು. ಪೇತ್ರನು ಸತ್ಯವೇದವನ್ನು ಇಸ್ರಾಯೇಲ್ಯ ಜನರಿಗೆ ಅನುಗ್ರಹಿಸಿದ ವಾಕ್ಯವು ಎಂಬುದಾಗಿ ಉಲ್ಲೇಖಿಸುತ್ತಾನೆ (ಅ.ಕೃ. 10:36). ನಂತರ ಆತನು ಕರ್ನೆಲ್ಯನೊಂದಿಗೆ ಪುನರುತ್ಥಾನದ ಕಥೆಯನ್ನು ಹಂಚಿಕೊಂಡನು. ಅಪೋಸ್ತಲನಾದ ಪೌಲನು ಹಳೆಯ ಒಡಂಬಡಿಕೆಯಲ್ಲಿರುವ ಕ್ರಿಸ್ತನ ಬರೋಣದ ಪ್ರವಾದನೆಯನ್ನು ಮತ್ತೆ ಮತ್ತೆ ತನ್ನ ಬೋಧನೆಯಲ್ಲಿ ಉಲ್ಲೇಖಿಸುತ್ತಿರುತ್ತಾನೆ. ಫಿಲಿಪ್ಪನು ಇಥಿಯೋಪಿಯದ ಕಂಚುಕಿಗೆ ಯೆಶಾಯ 53ನೇ ಅಧ್ಯಾಯದಲ್ಲಿ ಮೆಸ್ಸೀಯನ ಕುರಿತ ವಚನಗಳನ್ನು ಎಚ್ಚರಿಕೆಯಿಂದ ವಿವರಿಸಿದನು. ಪ್ರತಿ ಸಂದರ್ಭದಲ್ಲೂ ಶಿಷ್ಯರು ದೇವರವಾಕ್ಯವನ್ನೇ ಸಾರಿ ಹೇಳಿದರು, ಎಂದಿಗೂ ತಮ್ಮ ಬಗ್ಗೆ ಹೇಳಿಕೊಳ್ಳಲಿಲ್ಲ. ಪರಿಶುದ್ಧಾತ್ಮನಿಂದ ಪ್ರೇರಿತವಾದ ದೇವರ ವಾಕ್ಯವೇ ಅವರ ಅಧಿಕಾರಕ್ಕೆ ಆಧಾರವಾಗಿತ್ತು.

ಅ.ಕೃ. 4:4,31, ಅ.ಕೃ. 8:4; ಅ.ಕೃ. 13:48,49; ಅ.ಕೃ. 17:2 ಮತ್ತು ಅ.ಕೃ 18:24,25 ವಚನಗಳನ್ನು ಓದಿರಿ.

ಈ ವಚನಗಳು ಪರಿಶುದ್ಧಾತ್ಮನಿಗೂ, ದೇವರ ವಾಕ್ಯಕ್ಕೂ ಮತ್ತು ಹೊಸ ಒಡಂಬಡಿಕೆಯ ಸಭೆಯ ಸಾಕ್ಷಿಗೂ ಇರುವ ಸಂಬಂಧದ ಬಗ್ಗೆ ನಮಗೆ ಏನನ್ನು ಬೋಧಿಸುತ್ತದೆ.

ಯಾವ ಆತ್ಮವು ದೇವರ ವಾಕ್ಯವನ್ನು ಪ್ರೇರೇಪಿಸಿತ್ತೋ ಅದೇ ಆತ್ಮವು ವಾಕ್ಯದ ಮುಖಾಂತರ ಜೀವನವನ್ನು ಬದಲಾಯಿಸಲು ಕೆಲಸ ಮಾಡುತ್ತದೆ. ದೇವರವಾಕ್ಯದಲ್ಲಿ ಜೀವದಾಯಕ ಶಕ್ತಿಯು ಇರುತ್ತದೆ. ಯಾಕೆಂದರೆ ಅದು ಪವಿತ್ರಾತ್ಮನ ಮೂಲಕ ಬಂದ ಕ್ರಿಸ್ತನ ಜೀವವುಳ್ಳ ವಾಕ್ಯವಾಗಿದೆ.

________________________________________

________________________________________

2 ಪೇತ್ರ 1:21 ಮತ್ತು ಇಬ್ರಿಯ 4:12ನ್ನು ಓದಿರಿ. ಜೀವಿತಗಳನ್ನು ಬದಲಾಯಿಸುವಲ್ಲಿ ದೇವರವಾಕ್ಯವು ಬಹಳ ಶಕ್ತಿಯುತವಾಗಿರುತ್ತದೆ ಏಕೆ?

________________________________________

________________________________________

ಲೋಕಗಳು ಉಂಟಾಗಲಿ ಎಂದು ಹೇಳಿದಾಗಲೇ ಅವುಗಳನ್ನು ಉಂಟು ಮಾಡುವ ಶಕ್ತಿಯು ದೇವರವಾಕ್ಯದಲ್ಲಿದೆ. ಈ ವಾಕ್ಯವು ಶಕ್ತಿಯನ್ನು ಒದಗಿಸುತ್ತದೆ, ಇದು ಜೀವವನ್ನು ಪಡೆಯುತ್ತದೆ. ಪ್ರತಿ ಆಜ್ಞೆಯು ಒಂದು ವಾಗ್ದಾನವಾಗಿದೆ; ಮನಸ್ಸಿನಿಂದ ಸ್ವೀಕರಿಸಲ್ಪಡುತ್ತದೆ, ಆತ್ಮನಿಂದ ತೆಗೆದುಕೊಳ್ಳಪಡುತ್ತದೆ. ಇದು ತನ್ನೊಡನೆ ಅನಂತನ ಜೀವವನ್ನು ತರುತ್ತದೆ. ಇದು ಪ್ರಕೃತಿಯನ್ನು (ಸ್ವಭಾವವನ್ನು) ಪರಿವರ್ತಿಸಿ ಆತ್ಮವನ್ನು ದೇವರ ಹೋಲಿಕೆಗೆ ಸರಿಯಾಗಿ ಮರುಸೃಷ್ಟಿ ಮಾಡುತ್ತದೆ" – ಎಲೆನ್ ಜಿ ವೈಟ್, ಎಜುಕೇಷನ್, ಪುಟ 126.

ಸತ್ಯವೇದಕ್ಕೆ ಜೀವಿತಗಳನ್ನು ಮಾರ್ಪಡಿಸುವಂತಹ ಶಕ್ತಿ ಇದೆ ಯಾಕೆಂದರೆ ಸತ್ಯವೇದವನ್ನು ಪ್ರೇರಿಸಿದ ಆತ್ಮವೇ ಅದನ್ನು ಓದುವವರನ್ನು ಪ್ರೇರೇಪಿಸಿ ಬದಲಾಯಿಸುತ್ತದೆ. ನಾವು ದೇವರವಾಕ್ಯವನ್ನು ಇತರರೊಂದಿಗೆ ಹಂಚಿಕೊಳ್ಳುವಾಗ ಪರಿಶುದ್ಧಾತ್ಮನು ತಾನು ಪ್ರೇರಿಸಿದ ವಾಕ್ಯಗಳ ಮುಖಾಂತರ ಜೀವಿತಗಳನ್ನು ಬದಲಾಯಿಸುತ್ತಾನೆ. ದೇವರು ತನ್ನ ವಾಕ್ಯವನ್ನು ಆಶೀರ್ವದಿಸುವುದಾಗಿ ವಾಗ್ದಾನ ಮಾಡಿದ್ದಾನೆಯೆ ಹೊರತು ನಮ್ಮ ವಾಕ್ಯಗಳನ್ನಲ್ಲ. ಬಲವು ದೇವರ ವಾಕ್ಯದಲ್ಲಿದೆ, ಮನುಷ್ಯನ ಊಹೆಯಲ್ಲಿಲ್ಲ.

ಗುರುವಾರ ಜುಲೈ 30

## ಜೀವಿತವನ್ನು ಪರಿವರ್ತಿಸುವ ಪರಿಶುದ್ಧಾತ್ಮನ ಶಕ್ತಿ

ಅಪೋಸ್ತಲರ ಕೃತ್ಯಗಳು ಪುಸ್ತಕವನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡುವಾಗ ಅದು ಪವಿತ್ರಾತ್ಮನ ಮೂಲಕ ಮಾನವರ ಜೀವಿತಗಳಲ್ಲಿ ಅದ್ಭುತವನ್ನೆಸಗುವ ದೇವರನ್ನು ಪ್ರಕಟಪಡಿಸುತ್ತದೆ. ಅಪೋಸ್ತಲರ ಕೃತ್ಯಗಳು ಸಾಂಸ್ಕೃತಿಕ ಕಟ್ಟುಪಾಡುಗಳ ಮೇಲೆ ಸುವಾರ್ತೆಯು ಜಯಹೊಂದುವಂತಹ, ಜೀವನದ ಪರ್ಯಂತವೂ ಪರಿವರ್ತಿಸುವ ಆಳವಾಗಿ ಬೇರುಬಿಟ್ಟು ಅಭ್ಯಾಸಗಳ ಮೇಲೆ ಜಯವನ್ನು ಸಾಧಿಸುವ ಸುವಾರ್ತೆಯ ಬಗ್ಗೆ ಮತ್ತು ಸಮಸ್ತ ಮಾನವರಿಗೆ ಕ್ರಿಸ್ತನ ಕೃಪೆ ಮತ್ತು ಸತ್ಯವನ್ನು ಬೋಧಿಸುವ ಬಗ್ಗೆ ಮಾಡುವ ಪ್ರಕರಣದ ಅಧ್ಯಯನವಾಗಿದೆ. ಪವಿತ್ರಾತ್ಮನು ಜನರು ಎಲ್ಲಿದ್ದಾರೆಯೋ ಅಲ್ಲಿಯೇ ಸಂಧಿಸುತ್ತಾನೆ. ಆದರೆ ಅವರನ್ನು ಅದೇ ಜಾಗದಲ್ಲಿ ಬಿಟ್ಟುಬಿಡುವುದಿಲ್ಲ. ಅವನ ಇರುವಿಕೆಯಿಂದ ಅವರು ಬದಲಾಗುತ್ತಾರೆ. ಅವರ ಜೀವನಗಳು ಪರಿವರ್ತನೆಗೊಳ್ಳುತ್ತವೆ.

ಅ.ಕೃ. 16:11–15; 23–24; ಅ.ಕೃ 17:33,34 ಮತ್ತು ಅ.ಕೃ 18:8 ವಚನಗಳನ್ನು ಓದಿರಿ. ಸತ್ಯವೇದದಲ್ಲಿ ಪರಿವರ್ತನೆಯಾದವರ ಕೆಲವು ಕಥೆಗಳು ಮಾತ್ರ ಇವೆ. ಬೇರೆಬೇರೆ ನಿದರ್ಶನಗಳು ನಮಗೆ ಎಲ್ಲಾ ತರದ ಜನರ ಜೀವನಗಳನ್ನು ಬದಲಾಯಿಸುವ ದೇವರಶಕ್ತಿಯ ಬಗ್ಗೆ ಏನನ್ನು ಬೋಧಿಸುತ್ತವೆ?

ಜನರಲ್ಲಿ ಆಶ್ಚರ್ಯತರುವ ಎಂಥಾ ವೈವಿಧ್ಯತೆ ಇದೆಯಲ್ಲವೆ. ಲೂದ್ಯಳು ಯೆಹೂದಿ ವರ್ತಕಳಾಗಿದ್ದಳು, ಫಿಲಿಪ್ಪಿ ಪಟ್ಟಣದ ಸೆರೆಮನೆಯ ಅಧಿಕಾರಿಯು ಮಧ್ಯಮವರ್ಗದ ರೋಮಿನ ನಾಗರೀಕ ಸೇವಕನಾಗಿದ್ದನು. ಪರಿಶುದ್ಧಾತ್ಮನು ಸಮಾಜದ ಎಲ್ಲಾ ಸ್ವರದ ವ್ಯಕ್ತಿಗಳನ್ನು ತಲುಪುತ್ತಾನೆ. ಆತನ ಶಕ್ತಿಯು ಹೆಂಗಸರು, ಗಂಡಸರು, ಬಡವಬಲ್ಲಿದ, ಪಂಡಿತ ಪಾಮರರು ಎಲ್ಲರನ್ನು ಪರಿವರ್ತಿಸಲು ತಲುಪುತ್ತದೆ.

ನಮ್ಮ ಪಟ್ಟಿಯಲ್ಲಿ ಕಡೆಯದಾಗಿ ವಿಶಿಷ್ಟವಾದ ಮತ್ತೆರಡು ಪಾತ್ರಗಳಿವೆ. ಅ.ಕೃ 17:34ರಲ್ಲಿ ಅರಿಯೋಪಾಗದ ಸಭೆಯವನಾದ ದಿಯೋನುಸ್ಯನೂ ದಾಮರಿಯೆಂಬಾಕೆಯೂ ಪರಿವರ್ತನೆಯಾದ ವಿಷಯವನ್ನು ಹೊಂದಿದೆ.

ಸತ್ಯವೇದ ಕಾಲದಲ್ಲಿ ಅಥೇನಿನ ಅರಿಯೋಪಾಗದ ಸಭೆಯ ಕಾನೂನಾತ್ಮಕವಾದ ನ್ಯಾಯಾಧೀಶರ ಸಮಿತಿಯಾಗಿತ್ತು. ಅವರು ನ್ಯಾಯಾಲಯದಲ್ಲಿ ವಿಚಾರಣೆ ನಡೆಸುತ್ತಿದ್ದರು. ಗ್ರೀಕ್ ಸಮಾಜದಲ್ಲಿ ಇವರು ಪ್ರಧಾನರು, ಗೌರವಾನ್ವಿತರೂ ಆಗಿದ್ದರು.

ಪವಿತ್ರಾತ್ಮನ ಶಕ್ತಿಯಿಂದ ಅಪೋಸ್ತಲಾದ ಪೌಲನ ಸುವಾರ್ತೆಯ ಸೇವೆಯು ಸಮಾಜದ ಉನ್ನತ ವರ್ಗವನ್ನೂ ತಲುಪಿತು. ಕ್ರಿಸ್ಪನು ಯೆಹೂದ್ಯ ಸಭಾಮಂದಿರದ ಅಧ್ಯಕ್ಷನಾಗಿದ್ದನು (ಅ.ಕೃ 18:8). ಆತನು ಹಳೆಯ ಒಡಂಬಡಿಕೆಯ ಚಿಂತನೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದನು. ಪವಿತ್ರಾತ್ಮನು ಭೇದಿಸಿಕೊಂಡು ಹೋಗಿ ಅವನ ಜೀವನವನ್ನು ಬದಲಾಯಿಸಿದನು. ನಾವು ಇತರರಿಗೆ ಕ್ರಿಸ್ತನ ವಾಕ್ಯವನ್ನು ಹೇಳಿ ಅವರಿಗೆ ಸಾಕ್ಷಿಕೊಡುವಾಗ ಪವಿತ್ರಾತ್ಮನು ಎಲ್ಲಾ ತರದ ಜನರ ಜೀವಿತದಲ್ಲಿ ಗಮನಾರ್ಹ ಕೆಲಸಗಳನ್ನು ಮಾಡುವುದನ್ನು ನೋಡುತ್ತೇವೆ.

ಮೇಲಿನ ಪ್ರಕರಣಗಳ ಚರಿತ್ರೆಯನ್ನು (ನಿದರ್ಶನಗಳನ್ನು) ನೋಡುವಾಗ ಇವು ನಮ್ಮ ಸಾಕ್ಷಿಯಿಂದ ಹೇಗೆ ಬೇರೆ ಬೇರೆ ಹಿನ್ನೆಲೆಗಳಿಂದ ಬಂದ ಜನರು, ಬೇರೆ ಬೇರೆ ಸಂಸ್ಕೃತಿಯ ಜನರು ಬೇರೆ ಬೇರೆ ಶಿಕ್ಷಣ ಹೊಂದಿದವರು, ನಂಬಿಕೆಯುಳ್ಳವರು ಪವಿತ್ರಾತ್ಮನಿಂದ ತಮ್ಮ ಜೀವಿತಗಳಲ್ಲಿ ಬದಲಾಗುತ್ತಾರೆ ಎಂಬುದನ್ನು ತೋರ್ಪಡಿಸುತ್ತವೆ. ನಾವು ಎಂದಿಗೂ ಯಾರನ್ನು ತಲುಪುತ್ತೇವೆ ಅಥವಾ ತಲುಪಲಾರೆವು ಎಂಬುದನ್ನು ಊಹಿಸಲಾರೆವು ಮತ್ತು ಹಾಗೆ ಊಹಿಸಲೂ ಬಾರದು. ನಮ್ಮ ಕೆಲಸವೇನೆಂದರೆ ನಮ್ಮ ಜೀವಿತದ ಸಂಪರ್ಕಕ್ಕೆ ಬಂದ ಯಾರಿಗಾದರೂ ಮತ್ತು ಪ್ರತಿಯೊಬ್ಬರಿಗೂ ನಾವು ಸಾಕ್ಷಿಕೊಡುವವರಾಗಿರಬೇಕು. ಉಳಿದುದನ್ನು ಕರ್ತನು ಮಾಡುತ್ತಾನೆ. ಕ್ರಿಸ್ತನ ಮರಣವು ಸಾರ್ವತ್ರಿಕವಾದದ್ದು: ಅಂದರೆ ಎಂದೆಂದಿಗೂ ಅದು ಪ್ರತಿಯೊಬ್ಬ ಮನುಷ್ಯನಿಗೂ ಸಲ್ಲುತ್ತದೆ. ಈ ನಿರ್ಣಾಯಕ ಸತ್ಯವು ಯಾರೊಬ್ಬರೂ ರಕ್ಷಣೆಯ ನಿರೀಕ್ಷೆಗೆ ಹೊರತಾಗಿದ್ದಾರೆಂದು ನಮಗೆ ಭಾವಿಸಕೂಡದು ಎಂಬುದನ್ನು ಇದು ಹೇಗೆ ಬೋಧಿಸುತ್ತದೆ?

**ಶುಕ್ರವಾರ** **ಜುಲೈ 31**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ 'ದಿ ಗಿಫ್ಟ್ ಆಫ್ ದಿ ಸ್ಪಿರಿಟ್' ಪುಟ 47–56 ಅಪೊಸ್ತಲರ ಕೃತ್ಯಗಳು ಪುಸ್ತಕ 'ದಿ ಡಿಸೈರ್ ಆಫ್ ಏಜಸ್' ಪುಸ್ತಕದಲ್ಲಿ ನಿಮ್ಮ ಹೃದಯವು ಕಳವಳಗೊಳ್ಳದಿರಲಿ ಎಂಬ ಅಧ್ಯಾಯ ಪುಟ 667–672.

ಪವಿತ್ರಾತ್ಮನು ವಿಮೋಚನೆಯ ಪ್ರಕ್ರಿಯೆಯಲ್ಲಿ ತಂದೆ ಮತ್ತು ಮಗನ ಜೊತೆ ಸಹಕಾರಿಯಾಗಿದ್ದಾನೆ. ನಮ್ಮ ಎಲ್ಲಾ ಸಾಕ್ಷಿಯ ಚಟುವಟಿಕೆಗಳಲ್ಲಿ ಜನರನ್ನು ರಕ್ಷಿಸುವ ಆತನ ಕೆಲಸದಲ್ಲಿ ನಾವೂ ಕೂಡ ಸೇರಿಕೊಳ್ಳುತ್ತೇವೆ. ಆತನು ಹೃದಯಗಳಿಗೆ ಅರಿವನ್ನುಂಟು ಮಾಡುತ್ತಾನೆ. ಆತನು ಅವಕಾಶಗಳ ಬಾಗಿಲನ್ನು ತೆರೆಯುತ್ತಾನೆ. ತನ್ನ ವಾಕ್ಯದ ಮೂಲಕ ಮನಸ್ಸುಗಳಿಗೆ ಜ್ಞಾನೋದಯವನ್ನುಂಟು ಮಾಡಿ ಸತ್ಯವನ್ನು ಪ್ರಕಟಿಸುತ್ತಾನೆ. ನಮ್ಮನ್ನು ದಾಸತ್ವಕ್ಕೆ ದೂಡುವ, ಪೂರ್ವಾಗ್ರಹದ ಬಂಧನಗಳನ್ನು ಮುರಿದು ಹಾಕುತ್ತಾನೆ, ನಮ್ಮ ಸತ್ಯದ ದೃಷ್ಟಿಯನ್ನು ಮೊಬ್ಬಾಗಿಸುವ ಸಾಂಸ್ಕೃತಿಕ ಪಕ್ಷಪಾತಗಳ ಮೇಲೆ ವಿಜಯೋತ್ಸಾಹವನ್ನು ಮಾಡುತ್ತಾನೆ, ನಮ್ಮನ್ನು ಕಟ್ಟಿಹಾಕುವ ದುರಭ್ಯಾಸಗಳ ಸರಪಳಿಯನ್ನು ಕಿತ್ತು ನಮಗೆ ಬಿಡುಗಡೆಯನ್ನು ಕೊಡುತ್ತಾನೆ.

ನಾವು ಕ್ರಿಸ್ತನಿಗೆ ಸಾಕ್ಷಿಕೊಡುವಾಗ ನಾವು ಪವಿತ್ರಾತ್ಮನೊಂದಿಗೆ ಸಹಕರಿಸುತ್ತಿದ್ದೇವೆಂಬುದನ್ನು ನೆನಪು ಮಾಡಿಕೊಳ್ಳುವುದು ಬಹಳ ಮುಖ್ಯವಾಗಿರುತ್ತದೆ. ಆತನು ನಮಗಿಂತ ಮುಂಚೆ ಅವರನ್ನು ತಲುಪಿ ಸುವಾರ್ತೆಯನ್ನು ಅಂಗೀಕರಿಸುವಂತೆ ಅವರ ಹೃದಯಗಳನ್ನು ಸಿದ್ಧಪಡಿಸುತ್ತಾನೆ. ನಾವು ಜನರ ಮಧ್ಯದಲ್ಲಿ ಒಂದು ಕರುಣೆಯ ಕೆಲಸವನ್ನು ಮಾಡುತ್ತಿರುವಾಗ ನಮ್ಮ ಸಾಕ್ಷಿಯನ್ನು ಹಂಚಿಕೊಳ್ಳುತ್ತಿರುವಾಗ, ಸತ್ಯವೇದಾಧ್ಯಯನ ನಡೆಸುವಾಗ, ಸತ್ಯ ತುಂಬಿದ ಒಂದು ಕರಪತ್ರವನ್ನು ಇನ್ನೊಬ್ಬರಿಗೆ ಕೊಡುತ್ತಿರುವಾಗ ಅಥವಾ ಸುವಾರ್ತಿಕ ಕೂಟಗಳಲ್ಲಿ ಭಾಗವಹಿಸುತ್ತಿರುವಾಗ ಈ ಎಲ್ಲಾ ಸಂದರ್ಭಗಳಲ್ಲೂ ಪವಿತ್ರಾತ್ಮನು ಅಲ್ಲಿದ್ದುಕೊಂಡು ಅವರ ಮನಸ್ಸುಗಳಲ್ಲಿ ಚಲಿಸುತ್ತಿರುತ್ತಾನೆ.

ನಾವು ಒಬ್ಬ ವ್ಯಕ್ತಿಯನ್ನು ಬಿಟ್ಟು ದೂರಹೋದಾಗಲೂ ಪವಿತ್ರಾತ್ಮನು ಆ ವ್ಯಕ್ತಿಯ ಹೃದಯದಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿರುತ್ತಾನೆ, ಆತನನ್ನು ರಕ್ಷಣೆಯ ಪರಿಜ್ಞಾನಕ್ಕೆ ನಡೆಸಲು ಏನೆಲ್ಲಾ ಅಗತ್ಯವೋ ಅದನ್ನೆಲ್ಲಾ ಮಾಡುತ್ತಲೇ ಇರುತ್ತಾನೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಪವಿತ್ರಾತ್ಮನು ನಿಮ್ಮ ಸಾಕ್ಷಿಯು ಮುಖಾಂತರ ಬಲಯುತವಾಗಿ ಕೆಲಸ ಮಾಡಿದ ಸಂದರ್ಭವನ್ನು ಸಬ್ಬತ್ತು ಶಾಲೆಯ ಸದಸ್ಯರೊಂದಿಗೆ ಹಂಚಿಕೊಳ್ಳಿರಿ.

2. ನೀವು ನಿಮ್ಮ ನಂಬಿಕೆಯನ್ನು ಹಂಚಿಕೊಳ್ಳುತ್ತಿರುವಾಗ ಯಾವಾಗಲಾದರೂ ಗಾಬರಿಪಟ್ಟುಕೊಂಡಿದ್ದೀರಾ ಅಥವಾ ಭಯಪಟ್ಟುಕೊಂಡಿದ್ದೀರಾ? ಪವಿತ್ರಾತ್ಮನ ಸೇವೆಯ ಬಗ್ಗೆ ನಮಗಿರುವ ಜ್ಞಾನವು ಆ ಭಯವನ್ನು ಹೇಗೆ ಕಡಿಮೆ ಮಾಡುತ್ತದೆ ಮತ್ತು ಸಾಕ್ಷಿಕೊಡುವಾಗ ಭರವಸೆಯನ್ನು ಮೂಡಿಸುತ್ತದೆ?

3. ಈ ವಾರದ ಪಾಠದಲ್ಲಿ ನಾವು ಸಾಕ್ಷಿ ಕೊಡುವಾಗ ಪವಿತ್ರಾತ್ಮನು ನಡೆಸುವ ಚಟುವಟಿಕೆಗಳ ಬಗ್ಗೆ ಮಾತಾಡಿದೆವು. ನಮ್ಮ ಸಾಕ್ಷಿಯ ಕೆಲಸದಲ್ಲಿ ಪವಿತ್ರಾತ್ಮನು ನಮ್ಮ ಜೊತೆ ಕೆಲಸ ಮಾಡುವ ಕೆಲವು ಭಿನ್ನವಾದ ವಿಧಾನಗಳನ್ನು ಚರ್ಚಿಸಿರಿ. ಪವಿತ್ರಾತ್ಮನು ನಮ್ಮನ್ನು ಸಾಕ್ಷಿಕೊಡುವುದಕ್ಕೆ ಹೇಗೆ ಸಜ್ಜುಗೊಳಿಸುತ್ತಾನೆ ಮತ್ತು ನಾವು ಸಾಕ್ಷಿಕೊಡುವಾಗ ಇತರರ ಜೀವಿತದಲ್ಲಿ ಆತನು ಹೇಗೆ ಕೆಲಸ ಮಾಡುತ್ತಾನೆ?

4. ಈ ಪಾಠವು ಸತ್ಯವೇದದಲ್ಲಿ 'ಸಾಕ್ಷಿಗೆ' ಇರುವ ಪ್ರಾಮುಖ್ಯತೆಯ ಬಗ್ಗೆ ಮಾತಾಡುತ್ತದೆ. ನಮ್ಮ ನಂಬಿಕೆಗೂ ಮತ್ತು ಸಾಕ್ಷಿಗೂ ಸತ್ಯವೇದವು ಏಕೆ ನಿರ್ಣಾಯಕವಾದ ಘಟಕವಾಗಿದೆ? ಸತ್ಯವೇದವನ್ನು ನಂಬುತ್ತೇವೆಯೆಂದು ಹೇಳುತ್ತಾ ಅದರ ಅಧಿಕಾರ ಮತ್ತು ಸಾಕ್ಷಿಯನ್ನು ಯುಕ್ತಿಪೂರ್ವಕವಾಗಿ ತಗ್ಗಿಸುವವರ ಬಲೆಯಿಂದ ನಾವು ಹೇಗೆ ತಪ್ಪಿಸಿಕೊಳ್ಳಬಹುದು?